ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಕೆಂಪೇಗೌಡರ ಬಗ್ಗೆ ತಪ್ಪು ಮಾಹಿತಿ ಇದೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಕೆಂಪೇಗೌಡರ ಬಗ್ಗೆ ತಪ್ಪು ಮಾಹಿತಿ ಇದೆ.

ಶ್ರೀ ನೆ.ಲ. ನರೇಂದ್ರಬಾಬು: ಒಂದೇ ಒಂದು ತಪ್ಪು ಮಾಹಿತಿ ಇದೆ. ಏಕೆಂದರೆ, ಇವತ್ತು ನಾನು ಕೆಂಪೇಗೌಡರ ಪಾತ್ರ ಅಭಿನಯಿಸಿರುವುದು ಬೆಂಗಳೂರಿನ ದೂರದರ್ಶನದಲ್ಲಿ ಬರುತ್ತಿದೆ. ಕೆಂಪೇಗೌಡರ ಸೊಸೆಗೆ, ತಮ್ಮ ಮಾವ ಕಟ್ಟಿರತಕ್ಕಂತಹ ಕೆರೆ ನಿಲ್ಲುತ್ತಿಲ್ಲವೆನ್ನುವ ಮಾತು ಆಕೆಯ ಕಿವಿಗೆ ಬೀಳುತ್ತದೆ. ಆಗ ತಮ್ಮ ಮಾವನನ್ನೂ ಕೇಳುವುದಿಲ್ಲ, ತುಂಬಿದ ಗರ್ಭಿಣಿ ತಾನೇ ಹೋಗಿ ಬಲಿ ಕೊಟ್ಟುಕೊಳ್ಳುತ್ತಾಳೆ. ಕೆಂಪೇಗೌಡರು ಹೇಳುವುದಿಲ್ಲ. ನನಗೆ ಆ ಪಾತ್ರ ಮಾಡಿ ಕಥೆ ಓದಿದ್ದರಿಂದ ಇದನ್ನು ನೆನಪು ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ನಾನೂ ಅದನ್ನೇ object ಮಾಡುವುದು. ಎಲ್ಲೋ ಮೂಢನಂಬಿಕೆಯ ಪರಮಾವಧಿ. ಆ ತರಹ ಇದ್ದರೆ ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಿಸಿ.

ಅಧ್ಯಕ್ಷರು: ಪರಿಶೀಲಿಸುತ್ತೇನೆ.

(ಖ) ರಾಜ್ಯದ ರೇಷ್ಮೆ ಬೆಳೆಗಾರರು ಆತಂಕದಲ್ಲಿರುವ ಬಗ್ಗೆ

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದ ರೇಷ್ಮೆ ಬೆಳೆಗಾರರು ಬಹಳ ಆತಂಕದಲ್ಲಿದ್ದಾರೆ. ಅವರ ಜೊತೆಗೆ ರೇಷ್ಮೆ ನೂಲು ಬಿತ್ತುವಂತಹ ಒಂದು ಸಮುದಾಯದವರು ಬಹಳ ಅತಂಕದಲ್ಲಿದೆ. ಕಾರಣವೇನೆಂದರೆ, ಕಳೆದ ಒಂದು ವರ್ಷದಿಂದ ಏನು ರೇಷ್ಮೆ ಗೂಡಿಗೆ ಇದ್ದ

300–375 ರೂಪಾಯಿ ಬೆಲೆ ಅದು ಏಕಾಏಕಿ 200 ರಿಂದ 250 ರೂಪಾಯಿಂದ ರೂಪಾಯಿಗೆ ಇಳಿದಿದೆ. ರೇಷ್ಮೆ ಬೆಳೆ ಉತ್ಪಾದನೆಗೆ ಬಹಳ ಖರ್ಚಾಗುತ್ತಿದೆ. ಇವತ್ತು ಕೂಲಿ 200 ರೂಪಾಯಿ ಕೊಟ್ಟರೂ ರೇಷ್ಮೆ ಬೆಳೆಗೆ ಮಾತ್ರ ಬರುವುದಿಲ್ಲ. ಅದಕ್ಕೆ ಬೇರೆಬೇರೆ ತಾಂತ್ರಿಕವಾದ ಕಾರಣಗಳಿವೆ. ಹೀಗಾಗಿ ರೈತರಿಗೆ ಉತ್ಪಾದನೆ ವೆಚ್ಚ ಜಾಸ್ತಿಯಾಗಿದೆ. ವೈಜ್ಞಾನಿಕವಾಗಿ ಅದರ ಮೇಲೆ ಬಹಳ ಜಾಗೃತಿ ಮೂಡಿಸಬೇಕು. ಬಹಳ ಕಡಿಮೆ ನೀರು ಇರುವ ಜಾಗದಲ್ಲಿಯೇ ರೇಷ್ಮೆ ಬೆಳೆಯುವುದಕ್ಕೆ ಸಾಧ್ಯವಿರುವುದು. ನೀರಾವರಿ ಪ್ರದೇಶಗಳಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ರೇಷ್ಮೆ ಬೆಳೆ ನಮ್ಮ ರಾಜ್ಯದ ಒಂದು ಪ್ರಮುಖವಾದ ವಾಣಿಜ್ಯ ಬೆಳೆ. ಅಂತಹ ವಾಣಿಜ್ಯ ಬೆಳೆಯ ಬೆಲೆ ಏಕಾಏಕಿ ಕುಸಿದಿರುವುದರಿಂದ ರೈತರು ಬಹಳ ಆತಂಕದಲ್ಲಿದ್ದಾರೆ. ಶಿಡ್ಲಘಟ್ಟದಲ್ಲಿ ಈಗಾಗಲೇ ಮಾರುಕಟ್ಟೆ ಬಂದ್ ಮಾಡಿ ದೊಡ್ಡ ಪ್ರತಿಭಟನೆ ಮಾಡಿದ್ದಾರೆ ಹಾಗೂ ರಾಮನಗರದಲ್ಲೂ ರಸ್ತೆ ತಡೆ ಮಾಡಿ ದೊಡ್ಡ ಪ್ರತಿಭಟನೆ ಮಾಡಿದ್ದಾರೆ. ರಾಜ್ಯದಲ್ಲಿರುವ ಪ್ರತಿಯೊಬ್ಬ ರೈತರೂ ಇವತ್ತು ಆತಂಕದಲ್ಲಿದ್ದಾರೆ. ಇವತ್ತು ಕೇಂದ್ರ ಸರ್ಕಾರದವರು ರೇಷ್ಮೆ ಬೆಳೆ ಮೇಲೆ ಇರುವ ಆಮದು ಸುಂಕವನ್ನು ಶೇ. 30ರಿಂದ ಶೇ. 5ಕ್ಕೆ ಇಳಿಸುತ್ತಾರೆ ಎನ್ನುವ ಸುದ್ದಿ ಇದೆ. ಅದು ಏನೇ ಇರಲಿ, ಈ ರಾಷ್ಟ್ರದ ಒಟ್ಟು ಉತ್ಪಾದನೆಯಲ್ಲಿ 2/3 ಭಾಗ ರೇಷ್ಮೆಯನ್ನು ಕರ್ನಾಟಕ ರಾಜ್ಯ ಉತ್ಪಾದನೆ ಮಾಡುತ್ತಿದೆ. ಅಂತಹ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರ ರಕ್ಷಣೆ ಮಾಡುವುದರಲ್ಲಿ ನಮ್ಮ ಪಾತ್ರ ಬಹಳಷ್ಟು ಇದೆ. ಆ ಕಾರಣದಿಂದ, ರೇಷ್ಮೆ ಬೆಳೆ ಮೇಲಿನ ಆಮದು ಸುಂಕ ಹಿಂದೆ ಏನಿತ್ತು, 30% ಅದನ್ನೇ ಮುಂದುವರಿಸಬೇಕೆಂದು ದಯಮಾಡಿ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು ಮತ್ತು ಇವತ್ತು ಏನು ಬೆಲೆ ಕುಸಿದಿದೆ ಅದಕ್ಕೆ ತಕ್ಷಣ ಸರ್ಕಾರ ಮಾರುಕಟ್ಟೆಯಲ್ಲಿ intervene ಆಗಿ ರೇಷ್ಮೆ ಬೆಳೆಯನ್ನು ರಕ್ಷಣೆ ಮಾಡುವ ಕೆಲಸ ಆಗಬೇಕು. ಇಲ್ಲದೇಹೋದರೆ ನಮ್ಮ ರಾಜ್ಯದಲ್ಲಿ ಎಲ್ಲ ತರಹವಾದ ಪ್ರಯತ್ನಪಟ್ಟರೂ ನಾವು ನಿರೀಕ್ಷಿಸಿದಷ್ಟು ರೇಷ್ಮೆ ಉತ್ಪಾದನೆಯಾಗುವುದಿಲ್ಲ.

ನಮ್ಮ ರಾಜ್ಯದಲ್ಲಿ ಅವಶ್ಯಕತೆ ಇರುವಷ್ಟು ರೇಷ್ಮೆ ಉತ್ಪಾದನೆ ಆಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಇವತ್ತು ಬೇರೆ ರಾಷ್ಟ್ರಗಳಿಂದ ಕಡಿಮೆ ಬೆಲೆಗೆ ರೇಷ್ಮೆ ಆಮದು ಆದರೆ ನಮ್ಮ ಉತ್ಪಾದನೆ ಇನ್ನೂ ಕಡಿಮೆಯಾಗುತ್ತದೆ, ಉತ್ಪಾದನೆ ನಷ್ಟವಾಗುತ್ತದೆ, ನೂರಾರು ವರ್ಷದಿಂದ ಇರುವ ರೇಷ್ಮೆ ಬೆಳೆ, ರೇಷ್ಮೆ ಕೃಷಿಯನ್ನು ನಮ್ಮ ರಾಜ್ಯದಿಂದ ಕೈಬಿಡಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ರೇಷ್ಮೆ ಬೆಲೆ ಕುಸಿದಿರುವ ಹಿನ್ನೆಲೆಯಲ್ಲಿ ತಕ್ಷಣ ಸರ್ಕಾರ ಮಧ್ಯೆ ಪ್ರವೇಶಿಸಬೇಕು. ರೇಷ್ಮೆ ಬೆಳೆಗಾರರ ಪ್ರದೇಶದಲ್ಲಿರುವ ಶಾಸಕರ ಸಭೆ ನಡೆಸಬೇಕು. ಶಾಸಕರ ಅಭಿಪ್ರಾಯದ ಮೇಲೆ.

ಅಧ್ಯಕ್ಷರು: ಮೊನ್ನೆಯೂ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ಉತ್ತರ ಹೇಳಿದ್ದಾರೆ, ಮತ್ತೆ ನೀವು ಹೇಳಿದ್ದನ್ನೇ ಹೇಳಿಕೊಂಡು ಹೋದರೆ ಹೇಗೆ?

ಶ್ರೀ ವಿ. ಮುನಿಯಪ್ಪ: ಇದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇವತ್ತು ಇರತಕ್ಕಂಥ ಭವಿಷ್ಯತ್ತಿನ ವಿಚಾರ. ಹತ್ತು ಲಕ್ಷ ಕುಟುಂಬಗಳು ರೇಷ್ಮೆ ಬೆಳೆಯ ಮೇಲೆ ಅವಲಂಬಿತವಾಗಿದ್ದಾರೆ.

ಅಧ್ಯಕ್ಷರು: ಆಯಿತು, ಮೊನ್ನೆ ಈ ವಿಷಯದ ಬಗ್ಗೆ ಚರ್ಚೆಯಾಗಿದೆ, ಉತ್ತರವನ್ನೂ ನೀಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಚರ್ಚೆಯನ್ನೂ ಮಾಡಿದರು.

ಅಧ್ಯಕ್ಷರು: ಉತ್ತರವನ್ನೂ ಕೊಟ್ಟಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಅವರು ಉತ್ತರವನ್ನೂ ಕೊಟ್ಟಿದ್ದಾರೆ. ಆದರೆ, ಏನೂ ಪ್ರಯೋಜವಾಗಿಲ್ಲ.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಲಿ.

ಶ್ರೀ ಡಿ.ಕೆ. ಶಿವಕುಮಾರ್: ರೇಷ್ಮೆ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಲಿ, ಸರ್ಕಾರವೇ ರೇಷ್ಮೆಯನ್ನು ಖರೀದಿ ಮಾಡಲಿ.

ಶ್ರೀ ವಿ. ಮುನಿಯಪ್ಪ: Support price ಘೋಷಣೆ ಮಾಡಲಿ. ಸರ್ಕಾರವೇ ಮಾರುಕಟ್ಟೆಗೆ ಮಧ್ಯಪ್ರವೇಶಿಸಿ ರೇಷ್ಮೆಯನ್ನು ಖರೀದಿ ಮಾಡಲಿ. ದಯಮಾಡಿ ತಕ್ಷಣ ಸರ್ಕಾರ ಬೆಲೆಯನ್ನು stabilize ಮಾಡುವಂತಹ ಕೆಲಸ ಮಾಡಿ ರೇಷ್ಮೆ ಬೆಳೆಗಾರರ ರಕ್ಷಣೆಗೆ ಬರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಗೌರವಾನ್ವಿತ ಸದಸ್ಯರಾದ ಶ್ರೀ ಮುನಿಯಪ್ಪನವರು, ಈ ಹಿಂದೆ ರೇಷ್ಮೆ ಇಲಾಖೆಯಲ್ಲಿ ಸಾಕಷ್ಟು ನುರಿತ ಅನುಭವ ಹೊಂದಿರುವ ಒಬ್ಬ ಹಿರಿಯ ಸದಸ್ಯರು. ರೇಷ್ಮೆ ಬೆಳೆಗಾರರ ಸಮಸ್ಯೆಯೂ ಅವರಿಗೆ ಚೆನ್ನಾಗಿ ಗೊತ್ತಿದೆ. ಇತ್ತೀಚೆಗೆ ಒಂದು ಆಘಾತ ತರುವಂತಹ ಸಂಗತಿ ಎಂದು ಹೇಳಿದರೆ, ಕೇಂದ್ರ ಸರ್ಕಾರ custom duty ಕಡಿಮೆ ಮಾಡಿದೆ. ಇದರ ಪರಿಣಾಮ ಇಲ್ಲಿಗೆ ಬಹಳ ದೊಡ್ಡಪ್ರಮಾಣದಲ್ಲಿ ರೇಷ್ಮೆ ಹೊರಗಡೆಯಿಂದ ಬರುವುದಕ್ಕೆ ರೇಷ್ಮೆ ಬೆಳೆಗಾರರಿಗೆ ಇದರಲ್ಲಿ ಬಹಳ ತೊಂದರೆಯಾಗುತ್ತದೆ. ಎಲ್ಲಾ ರೀತಿಯ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಾವು ಗಮನಿಸಿರಬಹುದು, ಈ ರಾಜ್ಯದಲ್ಲಿ ಕೃಷಿಕ ಉಳಿಯಬೇಕೆಂದು ಇದ್ದರೆ, ಬೇರೆ ಬೇರೆ ರೀತಿಯ ಕೃಷಿಯಲ್ಲಿ ಅವನು ತನ್ನನ್ನು ತಾನು ತೊಡಗಿಸಿಕೊಳ್ಳಬೇಕು, ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಅನುಕೂಲತೆಗಳು ಆಗಬೇಕು ಎನ್ನುವ ಕಳಕಳಿ ಹೊಂದಿರುವಂತಹ ಸರ್ಕಾರ ನಮ್ಮದು. ಅದಕ್ಕಾಗಿ ಈ ಬಾರಿ, ನಮ್ಮ ಶಾಸಕ ಮಿತ್ರರೆಲ್ಲರಿಗೂ ವಿನಂತಿ ಮಾಡುವುದೇನೆಂದರೆ, ಈ ವರ್ಷ 50,000 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಗಾರರು ದೊಡ್ಡ ಪ್ರಮಾಣದಲ್ಲಿ ರೇಷ್ಮೆ ಬೆಳೆಯುವುದಕ್ಕೆ ಮುಂದೆ

ಬರಬೇಕು. ಅವರಿಗೆ incentive ಆಗಿ ಎರಡೆರಡು ಎಕರೆಗೆ 5,000 ರೂಪಾಯಿಯಂತೆ 10,000 ರೂಪಾಯಿ ಕೊಡುತ್ತೇನೆಂದು ಬಜೆಟ್, ಆಯ-ವ್ಯಯದಲ್ಲಿ ಘೋಷಣೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಇಷ್ಟೇ ನಿಮಗೆ ಹೇಳುವುದಕ್ಕೆ ಇಚ್ಛಿಪಡುವುದು, Karnataka Silk Marketing Board ಮುಖಾಂತರ ರೇಷ್ಮೆ ಖರೀದಿ ಮಾಡುವುದಕ್ಕೆ ಕ್ರಮ ಕೈಗೊಳ್ಳುವುದು, ಕೇಂದ್ರ ಸರ್ಕಾರವೂ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ರೀತಿ ಸಹಾಯಹಸ್ತ ನೀಡಬೇಕು ಇದನ್ನು ವಿನಂತಿ ಮಾಡುವುದು, ಕೇಂದ್ರ ಸರ್ಕಾರ custom duty ಕಡಿಮೆ ಮಾಡಬಾರದು. ಇದರಿಂದ ರೇಷ್ಮೆ ಬೆಳೆಗಾರರು ಬೀದಿಪಾಲಾಗುತ್ತಾರೆ ಎನ್ನುವ ಅರಿವು ನನಗೆ ಇದೆ. ಈ ಬಗ್ಗೆ ಚರ್ಚೆ ಮಾಡೋಣ. ಕೇಂದ್ರಕ್ಕೂ ನಿಯೋಗ ತೆಗೆದುಕೊಂಡು ಹೋಗೋಣ, ಅವರ ಮನವೊಲಿಸೋಣ. ರೇಷ್ಮೆ ಬೆಳೆಗಾರರನ್ನು ಉಳಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಆ ದಿಕ್ಕಿನಲ್ಲಿ ನೀವು ಏನು ಸಲಹೆ ಕೊಟ್ಟರೂ ನಾನು ಸ್ವೀಕಾರ ಮಾಡಲು ಸಿದ್ಧನಿದ್ದೇನೆ. ರೇಷ್ಮೆ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

4. ಗಮನ ಸೆಳೆಯುವ ಸೂಚನೆ:

(ಅ) ವಿಷಯ: ತುಮಕೂರು ಜಿಲ್ಲೆ, ಶಿರಾ ನಗರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಬೀಡಿ ಕಾರ್ಮಿಕರು, ಕಡು ಬಡವರು ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದು, ಈ ಪ್ರದೇಶವನ್ನು 1984ರ ಕೌನ್ಸಿಲ್ ನಿರ್ಣಯದಂತೆ ನಿವೇಶನಗಳಿಗಾಗಿ ಹಂಚಿಕೆ ಮಾಡಲು ಕನಿಷ್ಟ ದರದಂತೆ ಹಣ ಪಾವತಿಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ತುಮಕುರು ಜಿಲ್ಲೆ, ಶಿರಾ ನಗರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಬೀಡಿ